# ಜಿಲ್ಲಾ ಪಂಚಾಯಿತಿ ವಿಜಯಪುರ

**ಕನಕದಾಸ ಬಡಾವಣೆ ವಿಜಯಪುರ –586109**

Email . ceo_zp_bjp@nic.in bjpdsnrega@gmail.com


ಸಂಖ್ಯೆ:ಜಿಪಂಉ/ಉಖಾಯೋ/ಹೊಗುಸಿ/ಜ.ಸ./ಸಿಆರ್- /2022-23 ದಿನಾಂಕ:21 -12-2022.

ಗೆ,

ಸಹಾಯಕ ನಿರ್ದೇಶಕರು.
ವಾರ್ತಾ ಮತ್ತು ಪ್ರಚಾರ ಇಲಾಖೆ,
ಕಂದಗಲ್ ಹಣಮಂತರಾಯ್ ರಂಗ ಮಂದಿರ,
ವಿಜಯಪುರ.

**ಮಾನ್ಯರೆ,**

**ವಿಷಯ**-: ಮಹಾತ್ಮಾ ಗಾಂಧಿ ನರೇಗಾ ಯೋಜನೆಯ ಜಲ ಸಂಜೀವಿನಿ ಕಾರ್ಯಕ್ರಮದಡಿ ಜಲ ಸಂಜೀವಿನಿ ಜಿಲ್ಲಾ ಸಂಯೋಜಕರ (ಹೊರ ಗುತ್ತಿಗೆ) ಹುದ್ದೆಗೆ ಅರ್ಜಿ ಅಹ್ವಾನಿಸುವ ಕುರಿತು.

ಉಲ್ಲೇಖ-: ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:RDC-EGS/900/2022 (E-937607), ದಿನಾಂಕ:08-12-2022.

-*-*-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ಮಹಾತ್ಮಾ ಗಾಂಧಿ ನರೇಗಾ ಯೋಜನೆಯ ಜಲ ಸಂಜೀವಿನಿ ಕಾರ್ಯಕ್ರಮದಡಿ ಹೊಸದಾಗಿ ಸೃಜಿಸಿದ ಜಲ ಸಂಜೀವಿನಿ ಜಿಲ್ಲಾ ಸಂಯೋಜಕರ ಹುದ್ದೆಗೆ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಸೇವೆಯನ್ನು ಪಡೆಯಲು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಈ ಕೆಳಗಿನ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆಯಲು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ಸೂಚಿಸಿದೆ.

| ಅ.ನಂ | ಹುದ್ದೆಯ ಹೆಸರು | ಖಾಲಿ ಇರುವ ಹುದ್ದೆಗಳ ಸಂಖ್ಯೆ | ನಿಗದಿಪಡಿಸಿದ ಅರ್ಹತೆ | ವಯೋಮಿತಿ |
|---|---|---|---|---|
| 1 | 2 | 3 | 4 | 5 |
| 01 | ಜಲ ಸಂಜೀವಿನಿ ಜಿಲ್ಲಾ ಸಂಯೋಜಕರು | 01 | • <u>ನಿವೃತ್ತಿ ಹೊಂದಿರುವ ಸರ್ಕಾರಿ ಅಧಿಕಾರಿಗಳು.</u><br>1) BSc. Agri ಅಥವಾ B.Tec (ಕೃಷಿ ಇಂಜಿನಿಯರಿಂಗ್)<br>2) ಕೃಷಿ ಅಥವಾ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ ನಿವೃತ್ತ ಅಧಿಕಾರಿಗಳು (ಕನಿಷ್ಠ ಸಹಾಯಕ ಕೃಷಿ ನಿರ್ದೇಶಕರು).<br>3) 10 ವರ್ಷಗಳ ಅನುಭವ ಹೊಂದಿರಬೇಕು.<br>4) ಕ್ಷೇತ್ರ ಭೇಟಿ, ಮಾರ್ಗದರ್ಶನ ನೀಡುವ ಸಾಮರ್ಥ್ಯ ಮತ್ತು ಇತರೆ ಇಲಾಖೆಗಳೊಡನೆ ಸಮನ್ವಯ ಸಾಧಿಸುವ ನಿಪುಣತೆ ಹೊಂದಿರಬೇಕು.<br>• <u>ಸರ್ಕಾರೇತರ /ಇತರೆ ಸಂಸ್ಥೆಗಳಲ್ಲಿ.</u><br>1) BSc. Agri ಅಥವಾ B.Tec (ಕೃಷಿ ಇಂಜಿನಿಯರಿಂಗ್) ಅಥವಾ GIS ತಂತ್ರಾಂಶದ ಪರಿಣಿತಿ ಹೊಂದಿರಬೇಕು.<br>2) ಸರ್ಕಾರೇತರ /ಇತರೆ ಸಂಸ್ಥೆಗಳಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದು, 10 ವರ್ಷಗಳ ಅನುಭವ ಹೊಂದಿರಬೇಕು.<br>3) ಕನಿಷ್ಠ ತಂಡದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿರಬೇಕು.<br>4) ಜಲಾನಯನ ಪ್ರದೇಶದ ಅಭಿವೃದ್ಧಿ, ದೂರ ಸಂವೇದಿ ಮತ್ತು ಜಿಯೋ ಸ್ಪೆಷಿಯಲ್ ಆಧಾರಿತ ತಂತ್ರಜ್ಞಾನ ಬಳಕೆಯ ಅನುಭವ ಹೊಂದಿರಬೇಕು.<br>5) ಕ್ಷೇತ್ರ ಭೇಟಿ, ಮಾರ್ಗದರ್ಶನ ನೀಡುವ ಸಾಮರ್ಥ್ಯ ಮತ್ತು ಇತರೆ ಇಲಾಖೆಗಳೊಡನೆ ಸಮನ್ವಯ ಸಾಧಿಸುವ ನಿಪುಣತೆ ಹೊಂದಿರಬೇಕು. | ಗರಿಷ್ಠ 65 ವರ್ಷ |
| 02 | ಮೇಲಿನ ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಿ, ಪತ್ರಿಕಾ ಪ್ರಕಟಣೆಯ ದಿನಾಂಕ | | ದಿನಾಂಕ: 22 -12-2022. | |
| 03 | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | | ದಿನಾಂಕ: 30 - 12-2022ರ ಸಾಯಂಕಾಲ 5-00 ರೊಳಗಾಗಿ. | |
| 05 | ಅರ್ಜಿ ನಮೂನೆ ಪಡೆಯಲು ಹಾಗೂ ಅರ್ಜಿ ಸಲ್ಲಿಸುವ ವಿಳಾಸ | | ಅಭಿವೃದ್ಧಿ ಶಾಖೆ, ಜಿಲ್ಲಾ ಪಂಚಾಯಿತಿ ವಿಜಯಪುರ.<br>ದೂರವಾಣಿ ಸಂಖ್ಯೆ:08352-276378. | |

ಹುದ್ದೆಯ ಅವಧಿ ; ಒಂದು ವರ್ಷಕ್ಕೆ (ಸರ್ಕಾರದ ಆದೇಶದಂತೆ ಅವಶ್ಯಕತೆಗೆ ಅನುಗುಣವಾಗಿ ಇವರ ಸೇವಾ ಅವಧಿಯನ್ನು ವಿಸ್ತರಿಸಲಾಗುವುದು.)

ಮಾಸಿಕ ವೇತನ ರೂ. 50,000/- ಗಳು ಮತ್ತು ಪ್ರಯಾಣ ಭತ್ಯೆ ಇತರೆ ರೂ. 5000/- ಗಳು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯಿತಿ ವಿಜಯಪುರ.

# ಅರ್ಜಿ ನಮೂನೆ - 1

## ಮಹಾತ್ಮ ಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ಜಲ ಸಂಜೀವಿನಿ ಜಿಲ್ಲಾ ಸಂಯೋಜಕರನ್ನು (JSDC) ಎಂಪ್ಯಾನೆಲ್‌ಮೆಂಟ್‌ಗಾಗಿ ಅರ್ಜಿ ನಮೂನೆ

ಅಭ್ಯರ್ಥಿಯ
ಭಾವಚಿತ್ರ

1 ಅರ್ಜಿದಾರರ ಹೆಸರು :

2 ಪ್ರಸ್ತುತ ವಿಳಾಸ :

3 ಖಾಯಂ ವಿಳಾಸ :

4 ಹುಟ್ಟಿದ ದಿನಾಂಕ ಮತ್ತು ವಯಸ್ಸು :

5 ವಿದ್ಯಾರ್ಹತೆ :

6 ಸೇವೆಗೆ ಸೇರಿದ ದಿನಾಂಕ ಮತ್ತು ಹೊಂದಿದ ಹುದ್ದೆ :

7 ಸೇವೆಯಿಂದ ನಿವೃತ್ತಿಯಾದಾಗ ಇದ್ದ ಹುದ್ದೆ :

8 ನಿವೃತ್ತಿಯಾದ ದಿನಾಂಕ :

9 ದೂರವಾಣಿ ಸಂಖ್ಯೆ :

ಮೊಬೈಲ್ ಸಂಖ್ಯೆ

ಇ–ಮೇಲ್

10 ಸೇವಾ ಅನುಭವದ ವಿವರ :

| ಕ್ರಸಂ | ಇಲಾಖೆ/ಸಂಸ್ಥೆ | ಹೊಂದಿದ ಹುದ್ದೆ | ಕರ್ತವ್ಯ ಮತ್ತು ಜವಾಬ್ದಾರಿ | ಅವಧಿ | ನಿರ್ವಹಿಸಿದ ಕರ್ತವ್ಯದ ಸೇವಾ ವಿವರ |
|---|---|---|---|---|---|
| 1 | 2 | 3 | 4 | 5 | 6 |
| | | | | | |

13. ನೀವು ವೈದ್ಯಕೀಯವಾಗಿ (ದೈಹಿಕವಾಗಿ ಮತ್ತು ಮಾನಸಿಕವಾಗಿ) ಕ್ಷೇತ್ರಗಳ ಭೇಟಿ ನಡೆಸಲು ಸದೃಡರಾಗಿರುವಿರಾ? (ಧೃಡೀಕೃತ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು).

14. (ಅ) ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದೀರಾ/ಆರೋಪ ಪಟ್ಟಿ ದಾಖಲಾಗಿದೆಯೇ?

(ಆ) ಇಲಾಖಾ ವಿಚಾರಣೆಯಲ್ಲಿ ದಂಡನೆಗೆ ಒಳಪಟ್ಟಿರುವಿರೇ/ಯಾವುದೇ ಇಲಾಖಾ ವಿಚಾರಣೆ ಬಾಕಿ ಇದೆಯೇ?
(ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು)

**ಘೋಷಣೆ**

ನಾನು ------------------ ಮೇಲ್ಕಂಡಂತೆ ನೀಡಿರುವ ಮಾಹಿತಿಯು ಸತ್ಯವಾಗಿರುತ್ತದೆ.ತಪ್ಪು ಮಾಹಿತಿ ನೀಡಿದ ಸಂದರ್ಭದಲ್ಲಿ ಕಾನೂನಿನ ಕ್ರಮಕ್ಕೆ ಒಳಗಾಗುವುದರ ಬಗ್ಗೆ ನನಗೆ ಮನವರಿಕೆಯಾಗಿದೆಯೆಂದು ಘೋಷಿಸುತ್ತೇನೆ.

ನಾನು ------------------- ಈ ಮೂಲಕ ದೃಢೀಕರಿಸುವುದೇನೆಂದರೆ, ನನ್ನ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಶಿಸ್ತಿನ ಪ್ರಕರಣಗಳು ಇರುವುದಿಲ್ಲವೆಂದು ಮತ್ತು ನನ್ನಿಂದ ಯಾವುದೇ ಬಾಕಿ ಹಣ (ಡಿಸಿಬಿ) ಇರುವುದಿಲ್ಲವೆಂದು ದೃಡೀಕರಿಸುತ್ತೇನೆ.

ನಾನು -------------------- ಭೌತಿಕವಾಗಿ ದೈಹಿಕ ಧೃಡತೆ ಹೊಂದಿರುವುದಲ್ಲದೇ, ಕ್ಷೇತ್ರ ಮಟ್ಟದ ಭೇಟಿಗೆ ಪ್ರವಾಸ ಕೈಗೊಳ್ಳಲು ಸಮರ್ಥನಾಗಿರುತ್ತೇನೆಂದು ದೃಢೀಕರಿಸುತ್ತೇನೆ,

ಸ್ಥಳ: ಅಭ್ಯರ್ಥಿಯ ಸಹಿ/-
ದಿನಾಂಕ:

**(ಅರ್ಜಿ ನಮೂನೆ ನಮೂನೆಯನ್ನು ಭರ್ತಿ ಮಾಡತಕ್ಕದ್ದು ಹಾಗೂ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಅಗತ್ಯ ದಾಖಲಾತಿಗಳನ್ನು ನೇರ ಸಂದರ್ಶನದ ದಿವಸ ಹಾಜರುಪಡಿಸತಕ್ಕದ್ದು)**